# "ವಟಸಾವಿತ್ರಿ ಹುಣ್ಣಿಮೆ"

## (ಜ್ಯೇಷ್ಠ ಶುದ್ಧ ಪೌರ್ಣಮಿ)

ಸಾವಿತ್ರಿಯು ಯಾವಾಗಲೂ ವಟವೃಕ್ಷದ ಸಮಸ್ತಭಾಗಗಳಲ್ಲೂ ಇರುವಳು.

ಸಾವಿತ್ರಿಯು ಮಾದ್ರದ ರಾಜನಾದ ಅಶ್ವಪತಿಯ ಮಗಳು. ತನಗೆ ಉತ್ತಮ ಮಗಳು ಬೇಕೆಂದು ಸವಿತೃನಾಮಕ ಪರಮಾತ್ಮನನ್ನು ಪ್ರಾರ್ಥಿಸಿದಾಗ, ಪರಮಾತ್ಮನು ಕರುಣಿಸಿದ ಮಗಳೇ "ಸಾವಿತ್ರಿ".

ದ್ಯುಮತ್ಸೇನನ ಮಗನಾದ ಸತ್ಯವಾನನು ನಾರದರ ಆದೇಶದಂತೆ ಸಾವಿತ್ರಿಯನ್ನು ವಿವಾಹವಾದನು. ನಾರದರು ಸಾವಿತ್ರಿಗೆ ಸತ್ಯವಾನನು ಅಲ್ಪಾಯುಷಿಯೆಂದು ತಿಳಿಸಿದರು. ಸಾವಿತ್ರಿಯು ಗಂಡನ ಆಯುಸ್ಸು ವೃದ್ಧಿಗೆ ಹಲವಾರು ವ್ರತವನ್ನಾಚರಿಸಿದಳು. ಅದರಲ್ಲಿ ಒಂದು ವ್ರತದ ಹೆಸರು ತ್ರಿರಾತ್ರವ್ರತ. ಮೂರೂ ದಿವಸಗಳಲ್ಲಿ ಉಪವಾಸವನ್ನು ಮಾಡಿದಳು. ಒಂದು ವರ್ಷ ಒಂದೇ ಹೊತ್ತು ಭೋಜನ. ಸುವಾಸಿನಿಯರ ಪೂಜೆ, ದಂಪತಿಗಳ ಪೂಜೆ ನೆರವೇರಿಸಿದಳು.

ಗಂಡನ ಮರಣದ ದಿನ ಮೊದಲೇ ತನಗೆ ತಿಳಿದಿದ್ದರಿಂದ, ಸಾವಿತ್ರಿಯೂ, ಗಂಡನೊಡನೆ, ವನಕ್ಕೆ ಹೋದಳು. ಸತ್ಯವಾನನು ಶಿರೋವೇದನೆಯಿಂದ ಮೃತನಾದನು. ಯಮಧರ್ಮನು ಯಮಪಾಶ ಹಿಡಿದುಕೊಂಡು ಕೋಣವೇರಿ ಬಂದು ಸತ್ಯವಾನನನ್ನು ಸೆಳೆದುಕೊಂಡು ದಕ್ಷಿಣಾಭಿಮುಖವಾಗಿ ಹೊರಟನು. ಸಾವಿತ್ರಿಯೂ ಹಿಂಬಾಲಿಸಿದಳು. ಪತಿಸೇವೆ, ಜ್ಞಾನವೃದ್ಧರ ಸೇವೆಯಿಂದ ಯಾವ ಲೋಕದಲ್ಲಿಯೂ ತಡೆಯಿಲ್ಲದೆ ಯಮಧರ್ಮನನ್ನು ಹಿಂಬಾಲಿಸಿದಾಗ,

ಅವಳನ್ನು ಸಂತೋಷಗೊಳಿಸಲು ಯಮಧರ್ಮನು ವರವೊಂದನ್ನು ನೀಡಲು ಉದ್ಯುಕ್ತನಾದಾಗ ಸಾವಿತ್ರಿಯು " ಆ ವರದಿಂದ ತನ್ನ ಮಾವನಿಗೆ ರಾಜ್ಯ ಹಾಗೂ ನೇತ್ರದಾನವನ್ನು ಬೇಡಿದಳು". ಸಾವಿತ್ರಿಯ ಧರ್ಮಸಮ್ಮತವಾದ ಮಾತುಗಳಿಂದ ಸಂತುಷ್ಟನಾದ ಯಮನು ಮತ್ತೊಂದು ವರವನ್ನು ಬೇಡೆನಲು "ಸತ್ಯವಂತನಿಂದ ನನಗೆ ನೂರು ಮಕ್ಕಳಾಗಲಿ" ಎಂದಳು. ಈ ಕೋರಿಕೆಯಿಂದ ಸಂತೋಷಗೊಂಡ ಯಮನು ಅದಕ್ಕೂ ಒಪ್ಪಿ ಅವಳ ಗಂಡನಿಗೆ ನೂರನಾಲ್ಕು ವರ್ಷಗಳ ಆಯುಸ್ಸನ್ನು ನೀಡಿ ಅನುಗ್ರಹಿಸಿದನು.

ಈ ರೀತಿ ಯಮನು ಅನುಗ್ರಹಿಸಲು ಕಾರಣ – ವಟಸಾವಿತ್ರಿವ್ರತವನ್ನು ಸಾವಿತ್ರಿಯು ಆಚರಿಸಿದ್ದು ಹಾಗೂ ಅವಳ ತಂದೆಯು ಗಾಯತ್ರಿಯನ್ನು ನಿರಂತರವಾಗಿ ಉಪಾಸನೆ ಮಾಡಿದ್ದೇ ಆಗಿದೆ. ಆದ್ದರಿಂದ ಸಕಲಸ್ತ್ರೀಯರಿಂದಲೂ ಅವೈಧವ್ಯಪ್ರಾಪ್ತಿಗಾಗಿ ವಟಸಾವಿತ್ರಿವ್ರತವನ್ನು ಆಚರಿಸಬೇಕೆಂಬ ನಿಯಮ.

ವ್ರತನಿಯಮ –

- ಜ್ಯೇಷ್ಠ ದ್ವಾದಶಿಯಂದು ಲಘುಭೋಜನ,
- ಮಾರನೇ ದಿನ ದಂತದಾವನ ಮಾಡಿ ವ್ರತದ ಹಿಂದೆ ಮೂರು ದಿನ ಉಪವಾಸ
- ಪೂರ್ಣಿಮೆಯಂದು ಭೋಜನ ಸ್ವೀಕಾರ
- ಚಂದ್ರಾರ್ಘ್ಯ, ಸುವಾಸಿನಿಯರ ಪೂಜೆ, ಸಾವಿತ್ರಿಯ ಪೂಜೆ, ದಂಪತಿಗಳ ಪೂಜೆ
- ಪ್ರತಿದಿನವೂ ವಟವೃಕ್ಷಕ್ಕೆ ಜಲಸೇಚನ, ಇತ್ಯಾದಿ ನಿಯಮ.

- ಪೂಜೆಗಾಗಿ ಬ್ರಹ್ಮ-ಸಾವಿತ್ರಿ-ಯಮಧರ್ಮ ಇವರುಗಳ ಬೆಳ್ಳಿಯ ಪ್ರತಿಮೆ ಮಾಡಿಸಿ ವಟವೃಕ್ಷದ ಕೆಳಗೆ ಇವರನ್ನು ಅಹ್ವಾನಿಸಿ ಪೂಜಿಸಬೇಕು.

ಸಂಗ್ರಹ - ನರಹರಿ ಸುಮಧ್ವ